<u>ದಿನಾಂಕ : ***06-03-2026*** ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲು : *2* ನೇ ಎದುರುದಾರರ ಪರ ಶ್ರೀ. ಬಿ ಡಿ ಪಿ ವಕೀಲರಿಂದ</u>**

ನಾನು ಅಪಘಾತ ದಿನ ವಾಹನ ನಂ. ಕೆಎ-29 ಇಎಲ್ 9267 ಇದರ ಮೇಲೆ ಹೊರಟಿದ್ದೆ. ನಾನು ನನ್ನ ವಾಹನದ ಮೇಲೆ ಭಿಮಪ್ಪ ತಳವಾರ ಮತ್ತು ವೆಂಕಪ್ಪ ವಡ್ಡರ ರವರು ಸೇರಿಕೊಂಡು ಹೊರಟಿದ್ದೇವು. ಇನ್ನೊಂದು ವಾಹನದ ನಂ. ಕೆಎ-36 ಇಇ 9536 ಇದರ ಮೇಲೆ ದುರಗೇಶ ವಡ್ಡರ, ಮಹಾಂತೇಶ ಮಾದರ ಮತ್ತು ವೆಂಕಪ್ಪ ವಡ್ಡರ ರವರು ಬರುತ್ತಿದ್ದರು. ಎರಡು ವಾಹನಗಳು ಜೊತೆ ಜೊತೆಗೆ ಹೊರಟಿದ್ದವು. ಕೆಎ-36 ಇಇ 9536 ಇದರ ಚಾಲಕನು ವೇಗವಾಗಿ ವಾಹನವನ್ನು ಚಲಾಯಿಸುತ್ತಿದ್ದನು. ಅವನ ತಪ್ಪಿನಿಂದ ಈ ಅಪಘಾತ ಆಗಿರುತ್ತದೆ. ಈ ನ್ಯಾಯಾಲಯದಲ್ಲಿ ಕೆಎ-36 ಇಇ 9536 ಇದರ ವಾಹನದ ಚಾಲಕನ ಮೇಲೆ ಪ್ರಕರಣವನ್ನು ದಾಖಲಿಸಿರುವುದಿಲ್ಲ. ಕೆಎ-36 ಇಇ 9536 ಈ ವಾಹನಕ್ಕೆ ವಿಮೆ ಇರಲಿಲ್ಲ. ಕೆಎ-36 ಇಇ 9536 ಈ ವಾಹನಕ್ಕೆ ವಿಮೆ ಇರದೇ ಇರುವುದರಿಂದ ಪರಿಹಾರದ ಹಣ ಬರುವುದಿಲ್ಲ ಎಂದು ತಿಳಿದು, ಕೆಎ-29 ಇಎಲ್ 9267 ಇದರ ಮೇಲೆ ಸುಳ್ಳಾಗಿ ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಅಪಘಾತವಾದ ನಂತರ ಮೊದಲು ಇಲಕಲ್ಲ ಸರಕಾರಿ ಆಸ್ಪತ್ರೆಗೆ ಹೋಗಿದ್ದು, ನಂತರ ಎನ್ ಆರ್ ಪಾಟೀಲ ಆಸ್ಪತ್ರೆಗೆ ಹೋಗಿರುತ್ತೇನೆ. ಎನ್ ಆರ್ ಪಾಟೀಲ ಆಸ್ಪತ್ರೆಗೆ ಹೋದಾಗ ನನಗೆ ಪ್ರಜ್ಞೆ ಇತ್ತು. ಆಸ್ಪತ್ರೆಯಲ್ಲಿ ಯಾವ ರೀತಿ ಅಪಘಾತ ಆಗಿದೆ ಎಂದು ನಾನೇ ಹೇಳಿ ಬರೆಸಿರುತ್ತೇನೆ. ಕೆಎ-29 ಇಎಲ್ 9267 ಇದನ್ನು ಭೀಮಪ್ಪ ಚಲಾಯಿಸುತ್ತಿದ್ದನು ಎಂದು ಸುಳ್ಳು ಮಾಹಿತಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಭೀಮಪ್ಪ ರವರಿಗೆ ಡಿಎಲ್ ಮತ್ತು ವಿಮೆ ಇರುತ್ತದೆ. ಕೆಎ-29 ಇಎಲ್ 9267 ಈ ವಾಹನಕ್ಕೆ ವಿಮೆ ಇರುವುದರಿಂದ ಮತ್ತು ಭೀಮಪ್ಪ ರವರಿಗೆ ಡ್ರೈವಿಂಗ್ ಲೈಸೆನ್ಸ ಇರುವುದರಿಂದ ಪರಿಹಾರದ ಹಣವನ್ನು ಪಡೆಯುವುದಕ್ಕೊಸ್ಕರ ಭೀಮಪ್ಪ ರವರ ಮೇಲೆ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತ ವಾದ ದಿನ ನಾನು ವಾಹನವನ್ನು ಚಲಾಯಿಸುತ್ತಿದ್ದೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ನನಗೆ ಸಾದಾ ಗಾಯಗಳು ಆಗಿರುತ್ತವೆ ಎಂದರೆ ಸರಿಯಲ್ಲ. ನಾನು 15 ದಿನಗಳ ಕಾಲ ಆಸ್ಪತ್ರೆಯಲ್ಲಿದಾಖಲಾಗಿದ್ದೆ ಮತ್ತು 2 ಲಕ್ಷ ರೂ. ಗಳನ್ನು ಖರ್ಚು ಮಾಡಿರುತ್ತೇನೆ ಎಂದುಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುಂದಿನ ಚಿಕಿತ್ಸೆಗಾಗಿ 1 ಲಕ್ಷ ರೂ.ಗಳು ಬೇಕು ಎಂದು ಸುಳ್ಳಾಗಿ

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ 20 ವರ್ಷ ವಯಸ್ಸು ಆಗಿತ್ತು ಎಂದು ಮತ್ತು ಕೂಲಿ ಕೆಲಸ ಮಾಡುತ್ತೇನೆ ಎಂದು ಮತ್ತು ತಿಂಗಳಿಗೆ 25 ಸಾವಿರ ರೂ.ಗಳನ್ನು ಗಳಿಸುತ್ತೇನೆ ಎಂದು ಸುಳ್ಳಾಗಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾಗುವ ಮೊದಲು ಹೇಗೆ ಕೆಲಸ ಮಾಡುತ್ತಿದ್ದೇನೋ ಹಾಗೆ ಈಗಲು ಕೂಡ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ವೈದ್ಯಕೀಯ ಬಿಲ್ಲುಗಳನ್ನು ಖೊಟ್ಟಿಯಾಗಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಕೆಎ-29 ಇಎಲ್ 9267 ಈ ವಾಹನಕ್ಕೆ 3 ನೇ ವ್ಯಕ್ತಿಯ ವಿಮೆ ಇತ್ತು, ಪಿಲಿಯನ್ ರೈಡರ ರವರಿಗೆ ವಿಮೆ ಕವರ ಇರಲಿಲ್ಲ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ 2 ನೇ ಎದುರುದಾರರು ಪರಿಹಾರದ ಹಣವನ್ನು ಕೊಡಲು ಭಾದ್ಯಸ್ತರಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು : 1 ನೇ ಎದುರುದಾರರು ಮತ್ತು ಅವರ ಪರ ವಕೀಲರು ಗೈರು ಹಾಜರಾಗಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ ಇಲ್ಲ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ )

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ, ಹುನಗುಂದ.